ಮೈಸೂರು ನಗರಕ್ಕೆ 2001 ರವರೆಗಿನ ಬೆಳವಣಿಗೆಗೆ ಬೇಕಾದ ನಗರೀಕರಣದ ಎಲ್ಲೆ (ಕಾನಬೇರ್ಷನ್ ಎಲ್ಲೆ) ಯನ್ನು ನಿಗಧಿ ಪಡಿಸಲಾಗಿದೆ. ನಗರೀಕರಣದ ಎಲ್ಲೆಯ ಮತ್ತು ಸ್ಥಳೀಯ ಯೋಜನಾ ಪ್ರದೇಶದ ಎಲ್ಲೆಯ ನಡುವಿನ ಪ್ರದೇಶವನ್ನು ವ್ಯವಸಾಯ ವಲಯ (ಹಸಿರು ವಲಯ) ವೆಂದು ಪರಿಗಣಿಸಲಾಗಿದೆ. ಮೈಸೂರು ನಗರಕ್ಕೆ 141 ಚದರ ಕಿ.ಮೀ. ಪ್ರದೇಶವನ್ನು ಹಸಿರು ವಲಯವೆಂದು ಗುರುತಿಸಲಾಗಿದೆ. ಅನುಮೋದಿತವಾದ ವ್ಯಾಪಕಾಭಿವೃದ್ಧಿಯ ವಲಯ ನಿಯಮಾವಳಿಗಳನ್ವಯ ಈ ಹಸಿರು ವಲಯದಲ್ಲಿಯ ಬೆಳವಣಿಗೆಗಳನ್ನು ನಿಯಂತ್ರಿಸಲಾಗುತ್ತದೆ.

ಇದಲ್ಲದೆ ಕರ್ನಾಟಕ ಭೂ ಕಂದಾಯ ಶಾಸನದಡಿಯಲ್ಲಿಯೂ ಕಂದಾಯ ಇಲಾಖೆಯವರು ಹಸಿರು ಪಟ್ಟಿಯನ್ನು ಘೋಷಿಸಿ ಅಧಿಸೂಚನೆ ಹೊರಡಿಸಲು ಅವಕಾಶವಿದೆ. ಇದಕ್ಕೆ ಬೇಕಾದ ಸರ್ವೆ ನಂಬರಿನ ವಿವರಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸರಕಾರಕ್ಕೆ ಕಳುಹಿಸಿದೆ. ಇಂಥ ಅಧಿಸೂಚನೆ ಹೊರಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

(7) ಬೆಳಗಾಂ ತಾಲ್ಲೂಕಿನ ನಾವಗೆ ಎಂಬಲ್ಲಿ ಜೀತಪದ್ಧತಿ ಕಂಡುಬಂದು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು.

SRI SUBHASH JOSHI : In Belgaum taluk in village of Navage bonded labourers are found, complaints are also made against the concerned firm. But, the Deputy Commissioner has not taken any action. According to Bonded Labour Abolition Act, the Home Department has to take the action. I request the Home Minister to take immediate action.

ಶ್ರೀ ಬಿ. ಶಿವಣ್ಣ (ಸಮಾಜಕಲ್ಯಾಣ ಸಚಿವರು) (ಮಾನ್ಯ ಗೃಹಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

(8) ಸುಳ್ಯ ತಾಲ್ಲೂಕಿನ ಸುಳ್ಯ ನಗರದಲ್ಲಿ ನೀರು ಸರಬರಾಜು ಯೋಜನೆಯ ಕುರಿತು.

ಶ್ರೀ ಕೆ. ಕುಶಾಲ (ಸುಳ್ಯ) : ಸುಳ್ಯ ತಾಲ್ಲೂಕಿನ ಸುಳ್ಯ ನಗರ ನೀರು ಸರಬರಾಜು ಯೋಜನೆಯನ್ನು ಕೈಕೊಂಡು ಎಷ್ಟು ವರ್ಷಗಳಾದವು, ಸದ್ರಿ ಯೋಜನೆಗೆ ಇಲಾಖೆಯಿಂದ ಈ ತನಕ ಯಾವ ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ. ಈ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಯಾವ ಬಾಬುಗಳ ಕಾಮಗಾರಿಗಳು, ಯಾವ ಹಂತವನ್ನು ತಲುಪುತ್ತದೆ. ಸದ್ರಿ ನೀರು ಸರಬರಾಜು ಯೋಜನೆಗೆ ಎಷ್ಟು ಓವರ್ ಹೆಡ್‌ಟ್ಯಾಂಕ್‌ಗಳ ನಿರ್ಮಾಣವಾಗಿದೆ, ಇನ್ನು ಎಷ್ಟು ಟ್ಯಾಂಕ್‌ಗಳ ರಚನೆ ಬಾಕಿ ಇದೆ. ಈ ಯೋಜನೆಗೆ ಬೇಕಾದ ನೀರೆತ್ತುವ ಪಂಪುಸೆಟ್ಟುಗಳ ಖರೀದಿ ಮತ್ತು ಪಂಪು ಹೌಸು ನಿರ್ಮಾಣ ಮಾಡಲಾಗಿದೆಯೇ, ಈ ಮೇಲಿನ ಯಾವುದೇ ಕೆಲಸಗಳನ್ನು ಕೈಕೊಳ್ಳದ ಕಳೆದ 6 ವರ್ಷಗಳ ಹಿಂದೆಯೇ ಕೇವಲ ಪೈಪುಗಳನ್ನು ಮಣ್ಣಿನಲ್ಲಿ ಹೂತು ಅಳವಡಿಸಲಾಗಿ ಸದ್ರಿ ಪೈಪುಗಳಲ್ಲಿ ಹಾಗೂ ಟಾಂಕಿಗಳಲ್ಲಿ ಪ್ರಾಯೋಗಿಕವಾಗಿ ನೀರು ಹಾಲಿ ದೃಢಪಡಿಸಿಕೊಳ್ಳುವ ಕೆಲಸವನ್ನು ಮಾಡದೇ ಇರಲು ಕಾರಣವೇನು? ಸದ್ರಿ ಕಾಮಗಾರಿಯನ್ನು 1987 ರಲ್ಲಿ ಜಿಲ್ಲಾಪರಿಷತ್‌ಗೆ ವಹಿಸಲು ಕೇಳಿದ್ದರೂ ವಹಿಸದೆ ಇದ್ದು ಕಾಮಗಾರಿಯನ್ನು ಪೂರ್ತಿಗೊಳಿಸದೆ, ಇಲಾಖೆಯು ಆದ ತೊಂದರೆ, ಮತ್ತು ಈಗ ಒಂದು ವಾರದಿಂದ ಸುಳ್ಯ ನಗರದ ಬಳಕೆದಾರರು ಕುಡಿಯುವ ನೀರಿನ ಸಮಸ್ಯೆ ಇವುಗಳನ್ನು ಕೂಡಲೇ

ಬಗೆಹರಿಸಲು ಇಲಾಖೆಯು ಏನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಸುಳ್ಯ ಪಟ್ಟಣವು ಮಧ್ಯಂತರ ಮಂಡಳವಾಗಿದೆ. ಇದರ ಜನಸಂಖ್ಯೆ 1981 ರ ಜನಗಣತಿಯ ಪ್ರಕಾರ 10,394 ಇರುತ್ತದೆ. ಇದಕ್ಕೆ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಯೋಜನೆಯನ್ನು 26 ಲಕ್ಷ ರೂಪಾಯಿಗಳ ವೆಚ್ಚದಲ್ಲಿ, ಅಂದಾಜಿನಲ್ಲಿ ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಕೈಕೊಂಡಿರುತ್ತಾರೆ. ಇದರ ಪರಿಷ್ಕೃತ ಅಂದಾಜು 48 ಲಕ್ಷದ 56 ಸಾವಿರ ರೂಪಾಯಿಗಳು. ಈ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಿ ನೀರು ಸರಬರಾಜು ಮಾಡಲು ಮಂಡಳಿಯವರಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಮೈಸೂರು ದಸರಾ ಹಬ್ಬದ ವ್ಯವಸ್ಥೆಯ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರಬೇಕಾಗಿದೆ. ಮೈಸೂರು ದಸರ ವ್ಯವಸ್ಥೆಯು ನಡೆಯುತ್ತಾ ಇದೆ. ಅದಕ್ಕೆ ವಿರೋಧ ಪಕ್ಷದ ನಾಯಕರು, ಉಪನಾಯಕರು, ವಿರೋಧ ಪಕ್ಷದ ಇತರ ಮುಖಂಡರುಗಳು, ಇವರುಗಳನ್ನು ಕರೆದು ಮಾತನಾಡಬೇಕಾತಂತಹ ಒಂದು ಸೌಜನ್ಯವನ್ನು ಅಲ್ಲಿಯ ವ್ಯವಸ್ಥಾಪಕರಿಗೆ ಇಲ್ಲ. ಇವೊತ್ತಿನವರೆಗೂ ಯಾರನ್ನೂ ಕೂಡ ಕರೆದು ಮಾತನಾಡಲಿಲ್ಲ. ಮೈಸೂರು ದಸರ ಎಂದರೆ ಪಾವಿತ್ರ್ಯತೆ ಮತ್ತು ಪವಿತ್ರವಾದಂಥ ಹಾಗೂ ಜಗತ್ಪ್ರಸಿದ್ಧವಾದಂಥ ದಸರ ಎಂದು ಕರೆಯಲ್ಪಡುತ್ತದೆ. ಅಲ್ಲಿ ಅಧಿಕಾರಿಗಳದ್ದೇ ಮೇಲುಗೈ ಆಗಿದೆ, ಅಧಿಕಾರಿಗಳೇ ಅದಕ್ಕೆ ಅಧ್ಯಕ್ಷರು. ಅಲ್ಲಿ ಹೈಪವರ್ ಕಮಿಟಿ ಎಂದು ಬಹಳ ಉನ್ನತವಾದಂಥ ಸಮಿತಿಯು ಇದೆ. ಅದರಲ್ಲಿ ನಮ್ಮೆಲ್ಲರ ಹೆಸರುಗಳು ಕೂಡ ಇದೆ. ಆದರೆ ವರ್ಷಕ್ಕೊಮ್ಮೆ ಯಾವುದೋ ಕಾಟಾಚಾರಕ್ಕಾಗಿ ಒಂದು ಸಮಿತಿಯನ್ನು ಕರೆಯುತ್ತಾರೆ, ಬೇರೆ ಉದ್ದೇಶಗಳು ಇಲ್ಲ. ಮೈಸೂರು ನಗರದ ಮತ್ತು ಪ್ರಾಚೀನವಾಗಿ ಮತ್ತು ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕಂಥ ಈ ದಸರ ಉತ್ಸವಕ್ಕೆ ವಿರೋಧ ಪಕ್ಷದ ನಾಯಕರನ್ನು ಕರೆಯಬೇಕು, ಆ ಸದನದ ವಿರೋಧಪಕ್ಷದ ನಾಯಕರನ್ನು ಕರೆಯಬೇಕು, ವಿರೋಧಪಕ್ಷದ ಮುಖಂಡರುಗಳನ್ನು ಕರೆಯಬೇಕು. ಏನೇನು ಉತ್ಸವ ಮಾಡುತ್ತೇವೆ ಎನ್ನುವಂಥ ಒಂದು ಪ್ರಸ್ತಾಪವು ಇಲ್ಲ; ಅಲ್ಲಿ ಸಂಪೂರ್ಣವಾಗಿ ಅಧಿಕಾರಿಗಳ ದರ್ಬಾರು ನಡೆಯುತ್ತಿದೆ. ಒಂದು ಕಾಲದಲ್ಲಿ ಮಹಾರಾಜರುಗಳ ದರ್ಬಾರು ಇತ್ತು. ಈಗ ಅಧಿಕಾರಿಗಳ ದರ್ಬಾರು ನಡೆದಿದೆ. ಈ ಬಗ್ಗೆ ಚರ್ಚೆಗೆ ತಾವುಗಳು ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ವೆಂಕಟೇಶ್ : ಅಲ್ಲಿ ವಸ್ತು ಪ್ರದರ್ಶನದಲ್ಲಿ ಕೃಷಿ ಇಲಾಖೆಯವರು ವಾಟರ್‌ಶೆಡ್ ಮಾಡುತ್ತಾ ಇದ್ದಾರೆ. ಕರ್ನಾಟಕ ಎಲ್ಲಾ ಜಿಲ್ಲಾಪರಿಷತ್‌ನವರು ಕೂಡ ಅಲ್ಲಿ ವಾಟರ್‌ಶೆಡ್ ಎಂದು ಪ್ರದರ್ಶನ ಮಾಡುತ್ತಿದ್ದಾರೆ. ಅದಕ್ಕೆ ಪ್ರತಿಯೊಂದು ಜಿಲ್ಲಾ ಪರಿಷತ್‌ನಿಂದ ಐದು ಲಕ್ಷರೂಪಾಯಿಗಳ ಖರ್ಚು ಬರುತ್ತದೆ. ಒಂದೇ ಸ್ಕೀಮ್‌ನ್ನು ಎಲ್ಲಾ ಜಿಲ್ಲಾಪರಿಷತ್‌ನವರೂ ತೋರಿಸುತ್ತಿದ್ದಾರೆ. ಕೃಷಿ ಇಲಾಖೆಯವರೂ ತೋರಿಸುತ್ತಿದ್ದಾರೆ. ಇದಕ್ಕಾಗಿ ಎಲ್ಲಾ ಜಿಲ್ಲಾಪರಿಷತ್ ಅಧಿಕಾರಿಗಳು ಮೈಸೂರಿಗೆ ಕಾರ್‌ನಲ್ಲಿ ಬಂದು ರೂಮ್ ರಿಸರ್ವೇಶನ್ ಇತ್ಯಾದಿ ಖರ್ಚು ಪೆಚ್ಚ ಮಾಡುತ್ತಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳ ಖರ್ಚು ಆಗುತ್ತಿವೆ. ಇದೇ ರೀತಿಯಾಗಿ ಅರಣ್ಯ ಇಲಾಖೆಯವರೂ ಮಾಡುತ್ತಿದ್ದಾರೆ. ಹೀಗೆ ಹಣದ ಲೂಟಿ ಆಗುತ್ತಿದೆ.